DAC – 530

**ತೃತೀಯ ಬಿ.ಎ. ಪದವಿ ಪರೀಕ್ಷೆ, ಸಪ್ಟೆಂಬರ್/ ಅಕ್ಟೋಬರ್ 2012**

**ಅಂಚೆ ಮತ್ತು ತೆರಪಿನ ಶಿಕ್ಷಣ**

**(ಹೊಸಬರಿಗೆ / ಹಳಬರಿಗೆ)**

**Directorate of Distance Education**

**ಬಸವ ತತ್ವ**

**ಪತ್ರಿಕೆ ೩ : ಕರಣ ಹಸಿಗೆ**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70/80

***ಸೂಚನೆಗಳು :*** *1) **30** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **70** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2) **20** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **80** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3) **ವಿಶೇಷ ಸೂಚನೆ : ಹೊಸಬರು ಡಿ** – ವಿಭಾಗದ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು.*

**ವಿಭಾಗ - ಎ**

I. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ''ಮೊಲೆ ಮೂಡಿ ಬಂದರೆ ಹೆಣ್ಣೆಂಬರು,
ಗಡ್ಡ ಮೀಸೆ ಬಂದರೆ ಗಂಡೆಂಬರು,
ನಡುವೆ ಸುಳಿವಾತ್ಮನು ಗಂಡೂ ಅಲ್ಲ,
ಹೆಣ್ಣು ಅಲ್ಲ ಕಾಣಾ ರಾಮನಾಥ''.

ಆ) ಲೋಕದ ಡೊಂಕು ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲ ಸಂಗಮದೇವ.

P.T.O.

ಇ) ''ವೀರಶೈವನಾದಡೆ ಪರಧನ ಪರಸತಿಯರ ಮುಟ್ಟದಿರಬೇಕು,
ಎಂತೂ ಪರಹಿಂಸೆಯನೆಸಗದಿರಬೇಕು
ಒಡಲಳಿದಡೆಯೂ ಹಿಡಿದಾಚಾರವ ಬಿಡದಿರಬೇಕು,
ಇಂತೀ ವೀರಾಚಾರವು ನೆಲೆಗೊಳ್ಳದೆ
ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವನೆಂತಪ್ಪನಯ್ಯಾ
ಕೂಡಲ ಸಂಗಮದೇವಾ ?''

## ವಿಭಾಗ – ಬಿ

II. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **(4×10=40)**

ಅ) ಆದರ್ಶ ಸಮಾಜದ ನಿರ್ಮಾಣಕ್ಕೆ ಬಸವಣ್ಣನವರು ಹೇಳಿದ ಐದು ಛಲಗಳನ್ನು ವಿವರಿಸಿ.

ಆ) ಭಕ್ತನ ಗುಣಲಕ್ಷಣಗಳನ್ನು ವಿವರಿಸಿ.

ಇ) ''ಕರ್ತವ್ಯವೇ ದೇವರು'' ಈ ಮಾತನ್ನು ಬಸವಣ್ಣನವರು ಹೇಗೆ ಸಾಧಿಸಬೇಕು ಎನ್ನುತ್ತಾರೆ ? ವಿವರಿಸಿ.

ಈ) ಉಪನಿಷತ್ತುಗಳ 'ಸರ್ವಂ ಖಲ್ವಿದಂ ಬ್ರಹ್ಮ' ಈ ವಾಕ್ಯವನ್ನು ವಿವರಿಸಿ.

ಉ) ಎಲ್ಲಾ ಸಾಮಾಜಿಕ ರೋಗಗಳಿಗೆ ಬಸವಣ್ಣನವರು ಅಸಂಗ್ರಹ ನೀತಿಯಲ್ಲಿ ಹೇಗೆ ಪರಿಹಾರ ಸೂಚಿಸಿದ್ದಾರೆ ?

## ವಿಭಾಗ – ಸಿ

III. ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ : **(4×5=20)**

ಅ) ಸ್ತ್ರೀ ಕುಲದ ಉದ್ಧಾರ

ಆ) ಒಳ ಪಂಗಡಗಳ ನಿರ್ಮೂಲನ

ಇ) ಮೊದಲು ನೀನು ನಿನ್ನನ್ನು ತಿದ್ದಿಕೋ

ಈ) ಮನಸ್ಸಿನ ಪರಿಶುದ್ಧತೆ

ಉ) ಶರಣರ ಅಘಟಿತಾ ಘಟನಾ ಶಕ್ತಿ.

## ವಿಭಾಗ – ಡಿ

**ವಿಶೇಷ ಸೂಚನೆ :** ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯ**ವಾಗಿ ಉತ್ತರಿಸಬೇಕು : **(1×10=10)**

ಅ) ಅಹಿಂಸೆಯು ಮಾನವ ಜನಾಂಗವನ್ನು ವಿನಾಶದ ದವಡೆಯಿಂದ ಪಾರು ಮಾಡಬೇಕಾದ ಅಸ್ತ್ರ ಎಂಬುದನ್ನು ನಿಜ ಧರ್ಮದ ತಿರುಳಿನಲ್ಲಿ ಹೇಗೆ ಶರಣರು ವಿವರಿಸಿದ್ದಾರೆ ?

---